All India Radio: Bangalore
National Bulletin In Kannada
05.06.2025 / 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

೧. ಇಂದು ವಿಶ್ವ ಪರಿಸರ ದಿನ : ತಾಯಿಯ ಹೆಸರಿನಲ್ಲಿ ಗಿಡ ನೆಡಿ ಉಪಕ್ರಮದ ಭಾಗವಾಗಿ ದೆಹಲಿಯಲ್ಲಿ ವಿಶೇಷ ಅಭಿಯಾನಕ್ಕೆ ಪ್ರಧಾನಿ ನರೇಂದ್ರಮೋದಿ ಚಾಲನೆ

೨. ಭಾರತದ ಮತ್ತೆರಡು ಜೌಗು ಪ್ರದೇಶ ರಾಮ್ಸರ್ ತಾಣಗಳ ಪಟ್ಟಿಗೆ ಸೇರ್ಪಡೆ : ಪ್ರಧಾನಿ ಶ್ಲಾಘನೆ

೩. ತತ್ಕಾಲ್ ಟಿಕೇಟ್ ಕಾಯ್ದಿರಿಸಲು ಶೀಘ್ರವೇ ಇ-ಆಧಾರ್ ದೃಢೀಕರಣ ಬಳಕೆ : ಸಚಿವ ಆಶ್ವಿನಿ ವೈಷ್ಣವ್

೪. ಬೆಂಗಳೂರು ಕಾಲ್ತುಳಿತ ಪ್ರಕರಣದಲ್ಲಿ ೧೧ ಮಂದಿ ಸಾವು : ಮ್ಯಾಜಿಸ್ಟೀರಿಯಲ್ ತನಿಖೆಗೆ ವಿಚಾರಣಾಧಿಕಾರಿಯಾಗಿ ಜಿಲ್ಲಾಧಿಕಾರಿ ನೇಮಕ

೫. ಫ್ರೆಂಚ್ ಓಪನ್ ಟೆನಿಸ್ ಟೂರ್ನಿ : ಪುರುಷರ ಸಿಂಗಲ್ಸ್‌ನ ಕಾಟರ್ ಫೈನಲ್ಸ್ ನಲ್ಲಿ ನೋವಾಕ್ ಜಾಕೋವಿಕ್ - ಅಲೆಕ್ಸಾಂಡರ್ ಜ್ವೆರೆವ್ ಸೆಣಸು

******************

ವಿಶ್ವ ಪರಿಸರ ದಿನವಾದ ಇಂದು ತಾಯಿ ಹೆಸರಿನಲ್ಲಿ ಒಂದು ಗಿಡ ನೆಡಿ-ಏಕ್ ಪೆಡ್ ಮಾ ಕೆ ನಾಮ್" ಉಪಕ್ರಮದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಭಗವಾನ್ ಮಹಾವೀರ್ ವನಸ್ಥಳಿ ಉದ್ಯಾನವನದಲ್ಲಿ ವಿಶೇಷ ಮರ ನೆಡುವ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ೭೦೦ ಕಿ.ಮೀ ಉದ್ದದ ಅರಾವಳ್ಳಿ ಶ್ರೇಣಿಯನ್ನು ಮರು ಅರಣ್ಯೀಕರಣ ಮಾಡುವ ಗುರಿಯನ್ನು ಹೊಂದಿರುವ ಮಹತ್ವಾಕಾಂಕ್ಷೆಯ 'ಅರಾವಳ್ಳಿ ಗ್ರೀನ್ ವಾಲ್ ಪ್ರಾಜೆಕ್ಟ್' ನ ನಿರ್ಣಾಯಕ ಭಾಗವಾಗಿ ಈ ಅಭಿಯಾನ ರೂಪಿಸಲಾಗಿದೆ.

ಪರಿಸರ ಸಂರಕ್ಷಣೆ ಮತ್ತು ಅರಣ್ಯೀಕರಣ ಪ್ರಯತ್ನಗಳಿಗೆ ಭಾರತದ ಬದ್ಧತೆಯ ಸಂಕೇತವಾಗಿ ನರೇಂದ್ರ ಮೋದಿ ಅವರು ಆಲದ ಸಸಿಯನ್ನು ನೆಡಲಿದ್ದಾರೆ.

ಅರವಳ್ಳಿ ಗ್ರೀನ್ ವಾಲ್ ಯೋಜನೆ ದೆಹಲಿ, ರಾಜಸ್ಥಾನ, ಹರಿಯಾಣ ಮತ್ತು ಗುಜರಾತ್‌ನ ೨೯ ಜಿಲ್ಲೆಗಳಲ್ಲಿ ಅರಾವಳ್ಳಿ ಬೆಟ್ಟಗಳ ಸುತ್ತಲೂ ೫ ಕಿ.ಮೀ ಬಫರ್ ವಲಯವನ್ನು ಗುರಿಯಾಗಿರಿಸಿಕೊಂಡಿದೆ. ಇದು ಹಸಿರು ಹೊದಿಕೆ ಪ್ರಮಾಣವನ್ನು ಹೆಚ್ಚಿಸುವುದು, ಜೀವವೈವಿಧ್ಯತೆ ಪುನಃಸ್ಥಾಪಿಸುವುದು, ಮಣ್ಣಿನ ಫಲವತ್ತತೆಯನ್ನು ಸುಧಾರಿಸುವುದು, ಜಲಮೂಲಗಳನ್ನು ಸಂರಕ್ಷಿಸುವುದು ಮತ್ತು ಈ ಪ್ರದೇಶದಲ್ಲಿ ಹವಾಮಾನ ಸ್ಥಿತಿಸ್ಥಾಪಕತ್ವ ವೃದ್ಧಿಸುವುದರ ಮೇಲೆ ಕೇಂದ್ರೀಕರಿಸುತ್ತದೆ.

ಧ್ವನಿ : ಪ್ರಧಾನಿ ನರೇಂದ್ರಮೋದಿ ( ೨೨ ಸೆಕೆಂಡ್)

ಅಲ್ಲದೆ, ಪರಿಸರ ಪ್ರಯೋಜನಗಳ ಜೊತೆಗೆ, ಈ ಯೋಜನೆಯು ಅರಣ್ಯೀಕರಣ ಮತ್ತು ಪುನಃಸ್ಥಾಪನೆ ಚಟುವಟಿಕೆಗಳ ಮೂಲಕ ಸ್ಥಳೀಯ ಸಮುದಾಯಗಳಿಗೆ ಉದ್ಯೋಗವನ್ನು ಸೃಷ್ಟಿಸುತ್ತದೆ ಮತ್ತು ಜೀವನೋಪಾಯದ ಅವಕಾಶಗಳನ್ನು ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಸುಸ್ಥಿರ ನಗರ ಚಲನಶೀಲತೆಯನ್ನು ಉತ್ತೇಜಿಸುವ ಕ್ರಮವಾಗಿ ದೆಹಲಿ ಸರ್ಕಾರದ ಸ್ವಚ್ಛ ಸಾರಿಗೆ ಉಪಕ್ರಮದ ಅಡಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ೨೦೦ ಎಲೆಕ್ಟ್ರಿಕ್ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಲಿದ್ದಾರೆ. ಈ ವಿದ್ಯುತ್ ಬಸ್‌ಗಳ ಪರಿಚಯವು ರಾಜಧಾನಿಯಲ್ಲಿ ವಾಯು ಮಾಲಿನ್ಯವನ್ನು ತಗ್ಗಿಸುವುದು ಮತ್ತು ಹಸಿರು ಸಾರಿಗೆಯ ಅಳವಡಿಕೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

*******************

ಜಗತ್ತಿನಾದ್ಯಂತ ಇಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತಿದೆ. ಪ್ರಕೃತಿ ಮತ್ತು ಭೂಮಿಯನ್ನು ರಕ್ಷಿಸಲು ಸಕಾರಾತ್ಮಕ ಪರಿಸರ ಕ್ರಮ ಕೈಗೊಳ್ಳಲು ಜಾಗತಿಕ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಭೂಮಿಯ ಮೇಲಿನ ಜೀವವನ್ನು ಉಳಿಸಲು ಅರಿವು ಮೂಡಿಸಲು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ ಭಾಗವಾಗಿ ೧೯೭೩ ರಿಂದ ಪ್ರತಿ ವರ್ಷ ಜೂನ್ ೫ ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ.

ಈ ವರ್ಷದ ವಿಶ್ವ ಪರಿಸರ ದಿನದ ಘೋಷವಾಕ್ಯ "ಪ್ಲಾಸ್ಟಿಕ್ ಮಾಲಿನ್ಯವನ್ನು ಸೋಲಿಸಿ" ಎಂಬುದಾಗಿದೆ.

******************

ಭಾರತದಿಂದ ಇನ್ನೂ ಎರಡು ಜೌಗು ಪ್ರದೇಶಗಳನ್ನು ರಾಮ್ಸರ್ ತಾಣಗಳ ಪಟ್ಟಿಗೆ ಸೇರಿಸಲಾಗಿದೆ, ಇದರಿಂದಾಗಿ ದೇಶದಲ್ಲಿ ಅಂತಹ ತಾಣಗಳ ಸಂಖ್ಯೆ ೯೧ ಕ್ಕೆ ತಲುಪಿದೆ. ಭಾರತದಲ್ಲಿನ ರಾಮ್ಸರ್ ತಾಣಗಳ ಪಟ್ಟಿಗೆ ಇತ್ತೀಚೆಗೆ ಸೇರ್ಪಡೆಗೊಂಡ ತಾಣಗಳೆಂದರೆ ರಾಜಸ್ಥಾನದ ಫಲೋಡಿಯ ಖಿಚನ್ ಮತ್ತು ಉದಯಪುರದ ಮೆನಾರ್. ಪರಿಸರ ಸಂರಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಹೆಚ್ಚಿನ ಒತ್ತು ನೀಡಿರುವುದು ಭಾರತವನ್ನು ಭವಿಷ್ಯದಲ್ಲಿ ಹಸಿರು ರಾಷ್ಟ್ರವನ್ನಾಗಿ ನಿರ್ಮಿಸಲು ಯಶಸ್ವಿಯಾಗಿ ಸಹಾಯ ಮಾಡುತ್ತಿದೆ ಎಂಬುದಕ್ಕೆ ಈ ಸಾಧನೆ ಮತ್ತೊಂದು ಸಾಕ್ಷಿಯಾಗಿದೆ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಹೇಳಿದ್ದಾರೆ. ಪರಿಸರ ಸಂರಕ್ಷಣೆಯಲ್ಲಿ ಭಾರತದ ನಿರಂತರ ಪ್ರಗತಿಯನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ. ಸಚಿವ ಯಾದವ್ ಅವರ ಸಾಮಾಜಿಕ ಮಾಧ್ಯಮ ಪೋಸ್ಟ್‌ಗೆ ಪ್ರತಿಕ್ರಿಯೆಯಾಗಿ, ಪರಿಸರ ಸಂರಕ್ಷಣೆಯಲ್ಲಿ ಭಾರತದ ದಾಪುಗಾಲುಗಳು ಹೆಚ್ಚಿನ ಹುರುಪಿನಿಂದ ನಡೆಯುತ್ತಿವೆ ಮತ್ತು ಸಾರ್ವಜನಿಕ ಪಾಲ್ಗೊಳ್ಳುವಿಕೆಯಿಂದ ಮುನ್ನಡೆಯುತ್ತಿವೆ ಎಂದು ನರೇಂದ್ರಮೋದಿ ಹೇಳಿದ್ದಾರೆ.

ಧ್ವನಿ : ಆಶಿಷ್, ಪ್ರತಿನಿಧಿ (೪೪ ಸೆಕೆಂಡ್ )

ಜಾಗತಿಕ ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಮಾನವ ಜೀವನವನ್ನು ಉಳಿಸಿಕೊಳ್ಳಲು ಮುಖ್ಯವಾದ ಜೌಗು ಪ್ರದೇಶಗಳ ಅಂತಾರಾಷ್ಟ್ರೀಯ ಜಾಲವನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸುವುದು ರಾಮ್ಸರ್ ಪಟ್ಟಿಯ ಉದ್ದೇಶವಾಗಿದೆ. ರಾಮ್ಸರ್ ಸಮಾವೇಶವು ಜೌಗು ಪ್ರದೇಶಗಳ ಸಂರಕ್ಷಣೆ ಮತ್ತು ಬುದ್ಧಿವಂತ ಬಳಕೆಗಾಗಿ ಅಂತರರಾಷ್ಟ್ರೀಯ ಒಪ್ಪಂದವಾಗಿದೆ. ೧೯೭೧ರ ಫೆಬ್ರವರಿ ೨, ರಂದು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಸಮುದ್ರದ ಇರಾನಿನ ನಗರವಾದ ರಾಮ್ಸರ್‌ನ ಹೆಸರನ್ನು ಇದಕ್ಕೆ ಇಡಲಾಗಿದೆ. ಭಾರತವು ೧೯೮೨ರ ಫೆಬ್ರವರಿ ೧, ರಂದು ಈ ಒಪ್ಪಂದವನ್ನು ಅಂಗೀಕರಿಸಿತು.

******************

ತತ್ಕಾಲ್ ಟಿಕೆಟ್‌ಗಳನ್ನು ಕಾಯ್ದಿರಿಸಲು ಭಾರತೀಯ ರೈಲ್ವೆ ಶೀಘ್ರದಲ್ಲೇ ಇ-ಆಧಾರ್ ದೃಢೀಕರಣ ಬಳಕೆಯನ್ನು ಆರಂಭಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಇದು ನಿಜವಾದ ಬಳಕೆದಾರರಿಗೆ ಅಗತ್ಯವಿರುವಾಗ ದೃಢೀಕೃತ ಟಿಕೆಟ್‌ಗಳನ್ನು ಪಡೆಯಲು ಸಹಾಯಕವಾಗುತ್ತದೆ ಎಂದು ಹೇಳಿದ್ದಾರೆ.

*******************

ಭಾರತ ಕಳೆದ ಒಂದು ದಶಕದಲ್ಲಿ ಗಮನಾರ್ಹ ಬದಲಾವಣೆಯನ್ನ ಕಂಡಿದ್ದು, ಸೇವೆ, ಸುಶಾಸನ ಮತ್ತು ಗರೀಬ್ ಕಲ್ಯಾಣ್ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ಇಂದಿನಿಂದ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಇಂದು ಆ ಮಾಲಿಕೆಯಲ್ಲಿ ನಾವು ಶಿಕ್ಷಣ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಆಗಿರುವ ಸಾಧನೆಗಳ ಬಗ್ಗೆ ಒಂದು ವರದಿ ಇಲ್ಲಿದೆ. ದೇಶದ ಮೂರನೇ ಒಂದು ಭಾಗದಷ್ಟು ಜನಸಂಖ್ಯೆ ೩೫ ವರ್ಷದೊಳಗಿನವರಾಗಿದ್ದು, ಭಾರತದ ಭವಿಷ್ಯವನ್ನು ಯುವಜನತೆ ಮುನ್ನಡೆಸುತ್ತಿದೆ. ಕೇಂದ್ರ ಸರ್ಕಾರ ಇಂದು ಶಿಕ್ಷಣ ಮತ್ತು ಕ್ರೀಡೆಯ ಮೂಲಕ ಯುವಜನರು ತಮ್ಮ ಭವಿಷ್ಯವನ್ನ ಕಂಡುಕೊಳ್ಳಲು ಭದ್ರ ಬುನಾದಿ ಹಾಕುತ್ತಿದೆ. ಶಿಕ್ಷಣ ವಲಯದಲ್ಲಿ ಸರ್ಕಾರ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ ಅಡಿ ಪ್ರಾಥಮಿಕ ಶಾಲೆಯಿಂದ ಪೌಢಶಾಲೆಯ ವರೆಗೆ ಶೇಕಡಾ ೧೦೦ರಷ್ಟು ಪ್ರವೇಶಾತಿಯ ಗುರಿಯನ್ನ ಹೊಂದಲಾಗಿದೆ. ಅಲ್ಲದೆ ಉನ್ನತ ಶಿಕ್ಷಣದಲ್ಲಿ ಸಮಗ್ರ ಕಲಿಕೆಯನ್ನು ಖಾತ್ರಿ ಪಡಿಸಲು ಒತ್ತು ನೀಡಲಾಗಿದೆ. ೨೧ನೇ ಶತಮಾನಕ್ಕೆ ಅಗತ್ಯ ಕೌಶಲ್ಯಗಳನ್ನು ವೃದ್ಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕ್ರೀಡಾವಲಯದಲ್ಲಿ ಖೇಲೊ ಇಂಡಿಯಾ ಸೇರಿದಂತೆ ಹಲವು ಮಹತ್ವದ ಕ್ರಮಗಳ ಮೂಲಕ ಪ್ರತಿಭೆಗಳಿಗೆ ಮನ್ನಣೆ ನೀಡಲಾಗುತ್ತಿದೆ.

*******************

ಆರ್ ಸಿ.ಬಿ ತಂಡದ ವಿಜಯೋತ್ಸವ ಸಮಾರಂಭದ ವೇಳೆ ಬೆಂಗಳೂರು ನಗರದಲ್ಲಿ ಉಂಟಾದ ಕಾಲ್ತುಳಿತ ಪ್ರಕರಣದಲ್ಲಿ ೧೧ ಮಂದಿ ಸಾವನ್ನಪ್ಪಿರುವ ಘಟನೆಗೆ ಸಂಬಂಧಿಸಿದಂತೆ ಸರ್ಕಾರ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿದ್ದು ಅದಕ್ಕಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಿದೆ.

೧೫ ದಿನಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ದ್ವಾರಗಳ ಬಳಿ ಉಂಟಾದ ಕಾಲ್ತುಳಿತ ಹಾಗೂ ಮೃತಪಟ್ಟವರ ಸಾವಿಗೆ ಕಾರಣಗಳು , ಘಟನಾವಳಿಗಳ ಸರಣಿ ಹಾಗೂ ಸನ್ನಿವೇಶಗಳ ಬಗ್ಗೆ ಮತ್ತು ಈ ಪ್ರಕರಣದಲ್ಲಿ ಉಂಟಾಗಿರಬಹುದಾದ ಲೋಪಗಳ ಕುರಿತು, ಲೋಪಕ್ಕೆ ಕಾರಣರಾದವರ ಬಗ್ಗೆ ಹಾಗೂ ನಿರ್ಲಕ್ಷ್ಯತೆಯ ಬಗ್ಗೆ ಸಮಗ್ರ ವರದಿ ಸಲ್ಲಿಸಲು ಸರ್ಕಾರ ಸೂಚಿಸಿದೆ. ಈ ಮಧ್ಯೆ ಮೃತರ ಕುಟುಂಬಗಳಿಗೆ ೧೦ಲಕ್ಷ ರೂಪಾಯಿ ಪರಿಹಾರವನ್ನು ಪ್ರಕಟಿಸಿದೆ. ಘಟನೆಯಲ್ಲಿ ೩೦ಕ್ಕೂ ಅಧಿಕ ಮಂದಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಶೋಕ ಘಟನೆ ಹಿನ್ನೆಲೆಯಲ್ಲಿ ಸರ್ಕಾರ ಇಂದು ನಡೆಯಬೇಕಿದ್ದ ಪರಿಸರ ದಿನಾಚರಣೆಯ ಎಲ್ಲಾ ಕಾರ್ಯಕ್ರಮಗಳನ್ನು ರದ್ದು ಗೊಳಿಸಿದೆ.

*******************

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ಯಾರಿಸ್‌ನ ನೊವಾಕ್ ಜೊಕೊವಿಕ್ , ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರ ಕ್ವಾಟರ್ ಫೈನಲ್ ವಿರುದ್ಧ ಸೆಣೆಸಲಿದ್ದಾರೆ ಹಾಗೂ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಫ್ರಾನ್ಸ್‌ನ ಲೋಯಿಸ್ ಬೋಯ್ಸನ್ ಸೆಮಿಫೈನಲ್ಸ್‌ಗೆ ದಾಪುಗಾಲಿಟ್ಟಿದ್ದಾರೆ. ವಿಶ್ವದ ನಂಬರ್ ೧ ಜಾನಿಕ್ ಸಿನ್ನರ್ ಕಳೆದ ರಾತ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕಝಾಕಿಸ್ತಾನದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಸೋಲಿಸಿ ಸೆಮಿಫೈನಲ್‌ಗೆ ಪ್ರವೇಶಿಸಿದರು. ನಿನ್ನೆ, ಎರಡನೇ ಶ್ರೇಯಾಂಕಿತ ಕಾರ್ಲೋಸ್ ಅಲ್ಕರಾಝ್ ಮತ್ತು ಇಟಾಲಿಯನ್ ಆಟಗಾರ್ತಿ ಲೊರೆಂಜೊ ಮುಸೆಟ್ಟಿ ಕೊನೆಯ ನಾಲ್ಕರಲ್ಲಿ ತಮ್ಮ ಸ್ಥಾನವನ್ನು ಖಚಿತಪಡಿಸಿಕೊಂಡರು. ಮಹಿಳಾ ಸಿಂಗಲ್ಸ್‌ನಲ್ಲಿ, ವಿಶ್ವದ ಎರಡನೇ ಶ್ರೇಯಾಂಕಿತ ಕೊಕೊ ಗೌಫ್ ಮತ್ತು ಶ್ರೇಯಾಂಕರಹಿತ ಲೋಯಿಸ್ ಬೋಯ್ಸನ್ ಕೊನೆಯ ನಾಲ್ಕರಲ್ಲಿ ತಮ್ಮ ಸ್ಥಾನಗಳನ್ನು ಕಾಯ್ದಿರಿಸಿದ ನಂತರ ಸೆಮಿಫೈನಲ್ ಲೈನ್‌ಅಪ್‌ಗಳನ್ನು ದೃಢಪಡಿಸಲಾಗಿದೆ.

*******************